ಅಪರಾಧಿ ಮನೋಭಾವ ಇಲ್ಲದೆ, ಮೋಸ ಮಾಡಿದೆ ಎಂಬ ಯಾವುದೇ ತಾಕಲಾಟ ಇಲ್ಲದೆ ಈ ವೃತ್ತದ ಒಳಬಂದಷ್ಟೇ ಆರಾಮಾಗಿ ಹೊರಹೋಗಬಹುದು.

## ಆ್ಯಪ್‌ನಲ್ಲಿ ಖಾತೆ ತೆರೆಯುವುದು ಹೇಗೆ?

ಟಿಂಡರ್ ಒಂದು ಜನಪ್ರಿಯ ಡೇಟಿಂಗ್ ಆ್ಯಪ್. ಅದನ್ನೇ ಉದಾಹರಣೆಯಾಗಿಟ್ಟುಕೊಂಡು ಡೇಟಿಂಗ್ ಆ್ಯಪ್‌ನ ಕಾರ್ಯನಿರ್ವಹಣೆಯ ಬಗ್ಗೆ ಅರಿಯೋಣ. ಗೂಗಲ್ ಪ್ಲೇಸ್ಟೋರ್‌ನಿಂದ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಫೋನ್ ನಂಬರ್ ಅಥವಾ ಫೇಸ್‌ಬುಕ್ ಖಾತೆಯ ಮೂಲಕ ಸೈನ್ ಅಪ್ ಆಗಬೇಕು. ಪ್ರೊಫೈಲ್ ಮಾಹಿತಿ ಜೊತೆ ಗಂಡು/ಹೆಣ್ಣು ಎಂಬುದನ್ನು ದಾಖಲಿಸಿ ಪ್ರೊಫೈಲ್ ಫೋಟೊ ಹಾಕಿದ ನಂತರ ಖಾತೆ ತೆರೆಯುತ್ತದೆ. ಅಲ್ಲಿಗೆ ನೀವು ಡೇಟಿಂಗ್ ಆ್ಯಪ್ ಜಗತ್ತಿನ ದಿಡ್ಡಿಬಾಗಿಲು ದಾಟಿ ಒಳಗಡಿ ಇಟ್ಟಿದ್ದೀರೆಂದು ಅರ್ಥ. ಮುಂದಿನ ಹಂತ ಸಂಗಾತಿ ಹುಡುಕಾಟ.

ತೆರೆದ ಖಾತೆಯ ಸ್ಕ್ರೀನಿನ ಮೇಲೆ ಬೇರೆ ಬೇರೆ ಪ್ರೊಫೈಲ್‌ಗಳು ಹಾಯ್ದುಹೋಗುತ್ತವೆ. ಅವುಗಳಲ್ಲಿ ಇಷ್ಟವಾಗುವ ಪ್ರೊಫೈಲ್‌ಗಳನ್ನು ಬಲಭಾಗಕ್ಕೆ ಸವರುವ ಮೂಲಕ ಲೈಕ್ ಮಾಡಬಹುದು. ನೀವು ಲೈಕ್ ಮಾಡಿದ ನಂತರ ಅವರೂ ತಿರುಗಿ ಲೈಕ್ ಮಾಡಿದರೆ ಅಲ್ಲಿಗೆ ನೀವಿಬ್ಬರೂ 'ಮ್ಯಾಚ್' ಆಗಿರುವಿರಿ ಎಂದರ್ಥ. ಅಲ್ಲಿಗೆ ಜಂಟಿ ಖಾತೆಯೊಂದು ತೆರೆದ ಹಾಗೆ. ಸಂಬಂಧದ ಮುಂದುವರಿಕೆಗಾಗಿ ಇನ್‌ಬಾಕ್ಸ್‌ಗೆ ಹೋಗಿ ನಿಮ್ಮನ್ನು ಲೈಕ್ ಮಾಡಿದವರ ಜತೆಗೆ ಚಾಟಿಂಗ್ ಆರಂಭಿಸಬಹುದು. ಮೊಬೈಲ್ ನಂಬರ್ ಹಂಚಿಕೊಳ್ಳಬಹುದು; ಮುಖತಃ ಭೇಟಿಯಾಗಬಹುದು. ಇನ್‌ಬಾಕ್ಸ್‌ನಲ್ಲಿ ಶುರುವಾದ ಸಂಬಂಧ ಇಬ್ಬರ ಒಪ್ಪಿಗೆಯ ಮೇರೆಗೆ ಭೇಟಿಯಿಂದ ಬೇರೆಲ್ಲಿಗೋ ವಿಸ್ತರಿಸಬಹುದು. ಮಧ್ಯದಲ್ಲಿ ಇಬ್ಬರಲ್ಲಿ ಒಬ್ಬರಿಗೆ 'ಸಾಕು' ಎನಿಸಿದರೆ ಅಲ್ಲಿಗೇ ನಂಟು ಕೊನೆಗೊಳ್ಳಬಹುದು.

ಒಬ್ಬ ವ್ಯಕ್ತಿ ಎಷ್ಟು ಪ್ರೊಫೈಲ್‌ಗಳನ್ನು ಬೇಕಾದರೂ ಲೈಕ್ ಮಾಡಬಹುದು. ಅಥವಾ ಆ್ಯಪ್‌ನಲ್ಲಿರುವ ಎಲ್ಲರಿಗೂ ನಿಮ್ಮ ಪ್ರೊಫೈಲ್ ಕಾಣಬಾರದು ಎಂದರೆ ಅದಕ್ಕೂ ಅವಕಾಶವಿದೆ. ಸೆಟ್ಟಿಂಗ್ಸ್‌ನಲ್ಲಿ ಡಿಸ್ಕವರಿ ಆಯ್ಕೆಯನ್ನು 'ಆಫ್' ಮಾಡಿದರೆ ಬೇರೆಯವರು ನಿಮ್ಮನ್ನು ಲೈಕ್ ಮಾಡಲಾಗುವುದಿಲ್ಲ. ನೀವು ಈಗಾಗಲೇ ಲೈಕ್ ಮಾಡಿರುವ ಪ್ರೊಫೈಲ್‌ನವರಿಗೆ ಮಾತ್ರ ನಿಮ್ಮ ಖಾತೆ ಕಾಣಿಸುತ್ತದೆ.

## ಅಕೌಂಟ್ ಡಿಲೀಟ್ ಮಾಡುವ ಬಗೆ

ಡೇಟಿಂಗ್‌ನ ಆ್ಯಪ್‌ಗಳ ಸಹವಾಸ ಸಾಕು ಎಂದೆನಿಸಿದರೆ ಅದರಲ್ಲಿನ ನಿಮ್ಮ ಅಸ್ತಿತ್ವವನ್ನು ಅಳಿಸಿ ಹೊರಬಂದುಬಿಡಬಹುದು. ಆ್ಯಪ್ ಡಿಲೀಟ್ ಮಾಡಿದರೆ ನಿಮ್ಮ ಖಾತೆ ಡಿಲೀಟ್ ಆಗಲಾರದು. ಸೆಟ್ಟಿಂಗ್ಸ್‌ಗೆ ಹೋಗಿ ಡಿಲೀಟ್ ಅಕೌಂಟ್ ಮೂಲಕ ಖಾತೆ ನಿಷ್ಕ್ರಿಯಗೊಳಿಸಬೇಕು. ಒಮ್ಮೆ ಡಿಲೀಟ್ ಆದ ನಂತರ ಅಲ್ಲಿನ ಚಾಟ್ ಉಳಿಯುವುದಿಲ್ಲ. ಸಂಪರ್ಕಗಳು ಕೂಡ ಅಳಿಸಿಹೋಗುತ್ತವೆ. ಬೇಕಿದ್ದರೆ ಮತ್ತೆ ಹೊಸ ಖಾತೆ ತೆರೆಯಬಹುದು.

## ಡೇಟಿಂಗ್ ಆ್ಯಪ್‌ಗಳು ಸುರಕ್ಷಿತವೆ?

ಅತ್ಯಾಚಾರ, ಮೋಸ, ಲೈಂಗಿಕ ದೌರ್ಜನ್ಯದ ಸುದ್ದಿಗಳನ್ನು ಅನುದಿನವೂ ಕಿವಿಯನ್ನು ತುಂಬಿ ತುಳುಕುವಷ್ಟು ಕೇಳುತ್ತಲೇ ಇರುತ್ತೇವೆ. ಇಂಥ ಸಮಾಜದಲ್ಲಿ ವರ್ಚುವಲ್ ಪ್ಲಾಟ್‌ಫಾರಂನಲ್ಲಿ ಸಿಕ್ಕ ಅಪರಿಚಿತ ವ್ಯಕ್ತಿಯೊಡನೆ ಸಂಭಾಷಿಸುವುದು, ಅವನ ಮಾತುಗಳು ಸತ್ಯವೋ ಸುಳ್ಳೋ ಎನ್ನುವುದನ್ನು ಗೊತ್ತುಮಾಡಿಕೊಳ್ಳದೆ ಡೇಟಿಂಗ್‌ಗೆ ಹೋಗುವುದು ಸುರಕ್ಷಿತವೇ? ಈ ಪ್ರಶ್ನೆಯಷ್ಟು ಉತ್ತರ ಸರಳವಲ್ಲ. ಯಾಕೆಂದರೆ ಡೇಟಿಂಗ್ ಆ್ಯಪ್‌ಗಳನ್ನು ವಿರೋಧಿಸುವ ಸಾಂಪ್ರದಾಯಿಕ ಮನಸ್ಥಿತಿಯವರು ಇದೇ ಪ್ರಶ್ನೆಯನ್ನು ಒಂದು ಆಯುಧದ ರೀತಿ ಬಳಸಿಕೊಂಡು ಡೇಟಿಂಗ್ ಎಂಬ ಪರಿಕಲ್ಪನೆಯನ್ನೇ 'ಅಪಾಯಕಾರಿ' ಎಂದು ಬಿಂಬಿಸಲು ಸದಾ ಪ್ರಯತ್ನಿಸುತ್ತಾರೆ. ಆ ಎಚ್ಚರ ಇಟ್ಟುಕೊಂಡೇ ಡೇಟಿಂಗ್ ಆ್ಯಪ್‌ನಲ್ಲಿ ಎದುರಾಗುವ ಅಪಾಯಗಳ ಬಗ್ಗೆ ನಿಜವಾದ ಅರಿವು ಇರಿಸಿಕೊಳ್ಳುವುದು ತುಂಬ ಅಗತ್ಯ.

ಆ್ಯಪ್‌ಗಳ ಪ್ರೊಫೈಲ್‌ಗಳ ಮೂಲಕ ನಿಮಗೆ ಎದುರಾಗುವ ವ್ಯಕ್ತಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಕುರಿತಾಗಿ ಆ್ಯಪ್‌ಗಳಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ಅವರ ಫೋಟೊ, ವೈಯಕ್ತಿಕ ವಿವರಗಳೂ ನಿಖರ ಎಂದು ಹೇಳಲಾಗದು. ಹೀಗಿರುವಾಗ ಕಿಂಚಿತ್ ಎಚ್ಚರ ವಹಿಸದೆ ಡೇಟಿಂಗ್ ಆ್ಯಪ್ ಇನ್‌ಬಾಕ್ಸ್‌ನಲ್ಲಿ ಆಡಿದ ಮಾತುಗಳನ್ನೇ ನಂಬಿಕೆಯ ತಳಹದಿಯಾಗಿಸಿಕೊಂಡು ಡೇಟಿಂಗ್‌ಗೆ ಹೋಗುವುದರಲ್ಲಿ ಖಂಡಿತ ಅಪಾಯ ಇದ್ದೇ ಇದೆ. ಇದು ಹುಡುಗ ಹುಡುಗಿ ಇಬ್ಬರೂ

> ಆನ್‌ಲೈನ್ ಡೇಟಿಂಗ್ ಆ್ಯಪ್‌ಗಳಿದ್ದರೂ ಭಾರತದಲ್ಲಿ ನಮ್ಮ 'ಮ್ಯಾಚ್' ಹುಡುಕುವುದು ಸುಲಭವಲ್ಲ. ಫೇಕ್ ಪ್ರೊಫೈಲ್‌ಗಳ ಕುರಿತು ಭಯ ಇರುವುದರಿಂದ ಕೇವಲ ಚಾಟಿಂಗ್ ಮಾಡಿದ್ದೇನೆ ಹೊರತು ಯಾರನ್ನೂ ಭೇಟಿಯಾಗಿಲ್ಲ.
>
> **-ಎಮಿಲಿ,** ಖಾಸಗಿ ಕಂಪನಿ ಉದ್ಯೋಗಿ

